<u>**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**</u>

ಸಿ.ಸಿ. ನಂಬರ 67/2018

ಸಿಡಬ್ಲ್ಯೂ- 9/ ಪಿಡಬ್ಲ್ಯೂ- 5

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಂತೋಷ |
| ತಂದೆಯ ಹೆಸರು | ಃ | ಯಲ್ಲಪ್ಪ ಅಮ್ಮಿನಬಾವಿ |
| ವಯಸ್ಸು | ಃ | 34 ವರ್ಷ |
| ವೃತ್ತಿ | ಃ | ಕೂಲಿ ಕೆಲಸ |
| ವಾಸ್ತವ್ಯ | ಃ | ಬಮ್ಮಿಗಟ್ಟಿ, ಕಲಘಟಗಿ |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 14-03-2024.

<u>**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**</u>

ಅಪಘಾತದಲ್ಲಿ ಮೃತ ವ್ಯಕ್ತಿ ನನ್ನ ತಂದೆ. ದಿಃ 13-11-2017 ರಂದು ನಾನು ಮಂಗಳೂರಿನಲ್ಲಿದ್ದಾಗ ಸಾಯಂಕಾಲ 7-30 ಗಂಟೆ ಸುಮಾರಿಗೆ ನನಗೆ ನಿಂಗಣ್ಣ ಎಂಬುವರು ಫೋನ ಕರೆ ಮಾಡಿದ್ದು, ನಿಮ್ಮ ತಂದೆಯವರಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಾನು ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಹೋದಾಗ ನಮ್ಮ ತಂದೆಯವರ ಮೃತ ದೇಹ ಆಸ್ಪತ್ರೆಯಲ್ಲಿತ್ತು. ನಾನು ಚಾಸಾ 1 ರವರನ್ನು ವಿಚಾರಿಸಿದಾಗ ಅಪಘಾತದ ಕುರಿತು ತಿಳಿಸಿರುತ್ತಾರೆ. ಭತ್ತ ಕೊಯ್ಯುವ ವಾಹನದ ಚಾಲಕನು ನಿಮ್ಮ ತಂದೆಯವರ ದ್ವಿಚಕ್ರ ವಾಹನಕ್ಕೆ ಅಗಡಿ ಗ್ರಾಮದ ಅರಣ್ಯ ಚೆಕ್ ಪೋಸ್ಟನ ಬಳಿ ಢಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ಕುರಿತು ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಂತರ ಅಪಘಾತಪಡಿಸಿದ ವಾಹನದ ಚಾಲಕನ ಹೆಸರು ತಿಳಿದಿದ್ದರಿಂದ ನಾನು ನನ್ನ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿತನನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರ ಪರ ವಕೀಲರು ಆರೋಪಿತನನ್ನು ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಅರ್ಜಿಯಲ್ಲಿ ನಮೂದಿಸಿರುತ್ತಾರೆ.

<u>**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಜಿ.ಆರ್.ಎ. ವಕೀಲರಿಂದ.**</u>

ನನ್ನ ಹೇಳಿಕೆಯಲ್ಲಿ ನಾನು ಅಗಡಿ ಗ್ರಾಮದಲ್ಲಿ ಇದ್ದೆನು ಎಂದು ಬರೆಸಿರುವುದಿಲ್ಲ. ನಾನು ನನ್ನ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಮ್ಮ ತಂದೆಯವರು ಅಪಘಾತದಲ್ಲಿ ಮೃತಪಟ್ಟಿದ್ದರಿಂದ ಪರಿಹಾರ ಹಣಕ್ಕಾಗಿ ಅರ್ಜಿಯನ್ನು

ದಾಖಲಿಸಿದ್ದು, ನಮಗೆ ಪರಿಹಾರ ಹಣ ಬಂದಿರುತ್ತದೆ. ಆರೋಪಿತನ ತಪ್ಪಿನಿಂದ ಯಾವುದೇ ಅಪಘಾತ ಸಂಭವಿಸದೇ ಇದ್ದರೂ ಸಹ ಬೇರೆಯವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

**ಪ್ರ.ದ.ನ್ಯಾ.ದಂ. ಮುಂಡಗೋಡ.**